ಲೇಖನ 06

# ಕರ್ನಾಟಕದ ರಾಣೆಬೆನ್ನೂರಿನ ವಿಶೇಷವಾದ ಪ್ರಾಣಿ "ಭಾರತದ ಚಿಗರಿ"

ಸ್ನೇಹಿತರೇ, ನಮ್ಮೂರಾದ ಧಾರವಾಡದಿಂದ ನಮ್ಮ ಸಂಬಂಧಿಕರ ಊರಾದ ರಾಣೆಬೆನ್ನೂರಿನ ಉದಗಟ್ಟಿಗೆ ನಾನು ನನ್ನ ತಂಗಿ ಬೆಳಿಗ್ಗೆ 5.15 ರ ಸಿದ್ದಗಂಗಾ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲ್ವೆ ಒಳಗ ಹೊಂಟಿದ್ವಿ, ಸರಿಸುಮಾರು 7.30ಕ್ಕೆ ರಾಣೆಬೆನ್ನೂರಿನ ಆಸು-ಪಾಸು ಇರುವ ಹೊಲಗಳನ್ನು ನನ್ನ ತಂಗಿ ನೋಡ್ತಾ ಇದ್ದಳು. ನೋಡಾಕತ್ತಾಗ ನನಗೆ ತಟ್ಟ ಅಂತ ಬಡದು ಆಶ್ಚರ್ಯ ಚಕಿತಳಾಗಿ ಅಲ್ಲಿ ನೋಡ ಅಣ್ಣಾ..! ಹೊಲದಾಗ ಯಾರೋ ನಿಮ್ಮ ವಿಶೇಷವಾದ ಸಂಬಂಧಿಕರು ಬಂದು ಕಾಳು ತಿಂತಾ ಇದಾರೆ ಅಂದ್ಲು, ನಾನು ಖುಷಿ ಖುಷಿಯಿಂದ ನಗ್ತಾ ಈಕಿಗೆ ಯಾವರ ನಮಂತಾ ವಿಚಿತ್ರ ಪ್ರಾಣಿ ಕಂಡಿರಬೇಕು. ಅದಕ ಹಿಂಗ ಅನ್ನಾಕತ್ತಾಳ ಅಂತ ನಾನು ಕಿಟಕಿಯಿಂದ ನೋಡಿದೆ. ನನಗೆ ಸಂತೋಷವೇ ಸಂತೋಷ ಏಕೆಂದರೆ ಅಲ್ಲಿ ನನಗೆ ಮತ್ತು ನನ್ನ ತಂಗಿಗೆ ಕಂಡದ್ದು ಬಹಳ ವಿಶೇಷವಾದ ಸುಂದರವಾದ ಪ್ರಾಣಿಯಾದ "ಭಾರತದ ಚಿಗರಿ". ನನ್ನ ತಂಗಿ ಅದರ ಬಗ್ಗೆ ಸ್ವಲ್ಪ ಮಾಹಿತಿ ಹೇಳಲ್ಲಾ ಅಂದ್ರೂ, ಅದಕ್ಕೆ ಅವಳಿಗೆ ಅದರ ಬಗ್ಗೆ ಮಾಹಿತಿ ಹೇಳಿದೆ.

ಸ್ನೇಹಿತರೇ, ನನಗೆ ನಿಮಗೂ ಕೂಡ ಈ ಪ್ರಾಣಿಯ ಬಗ್ಗೆ ಮಾಹಿತಿ ಹೇಳಬೇಕು ಅನಸ್ತಾ ಇದೆ. ನೀವು ಕೇಳೀ..

ಸ್ನೇಹಿತರೇ ಈ ಪ್ರಾಣಿಯನ್ನು "ಕೃಷ್ಣಮೃಗ" ಎಂದು ಸಹ ಕರೆಯುತ್ತಾರೆ. ರಾಣೆಬೆನ್ನೂರು ಕೃಷ್ಣಮೃಗಗಳಿಗೆ ಹೆಸರುವಾಸಿಯಾಗಿದೆ. ರಾಣೆಬೆನ್ನೂರಿನ ಕೃಷ್ಣಮೃಗ ಅಭಯಾರಣ್ಯದಲ್ಲಿ ಸರಿಸುಮಾರು 7000 ಕೃಷ್ಣಮೃಗಗಳಿವೆಯಂತೆ. ಇದನ್ನು ಬ್ಲ್ಯಾಕ್‌ಬಕ್ (ಆಂಟಿಲೋಪ್ ಸೆರ್ವಿಕಾಪ್ರಾ) ಅಥವಾ ಇಂಡಿಯನ್ ಆಂಟಿಲೋಪ್ (ಭಾರತದ ಹುಲ್ಲೆ) ಎಂದು ಸಹ ಕರೆಯುತ್ತಾರೆ. ಇದು ಭಾರತ ಮತ್ತು ನೇಪಾಳಕ್ಕೆ ಸ್ಥಳೀಯವಾಗಿರುವ ಹುಲ್ಲೆಗಳ ಜಾತಿಯಾಗಿದೆ. ಬ್ಲ್ಯಾಕ್‌ಬಕ್ ಭಾರತ ಉಪಖಂಡದಾದ್ಯಂತ ವ್ಯಾಪಕವಾಗಿ ಹರಡಿದೆ. ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ಅಳಿವಿನಂಚಿನಲ್ಲಿದೆ. ಭಾರತ ಮತ್ತು ನೇಪಾಳದಲ್ಲಿ ಸಂರಕ್ಷಿತ ಪ್ರದೇಶಗಳಲ್ಲಿ ಬ್ಲ್ಯಾಕ್‌ಬಕ್ ನ ಚದುರಿದ ಗುಂಪುಗಳು ಮಾತ್ರ ಕಂಡುಬರುತ್ತವೆ.



ಚಿತ್ರ ಕೃಪೆ: ಗುರು ಪ್ರಸಾದ್

ಗಂಡು ಬ್ಲ್ಯಾಕ್‌ಬಕ್‌ನ ಬೆನ್ನಿನ ಭಾಗ ನಯವಾದ ಗಾಢ ಕಂದು ಅಥವಾ ಕಪ್ಪು ತುಪ್ಪಳದಿಂದ ಮುಚ್ಚಲ್ಪಟ್ಟಿದೆ. ಎದೆ, ಹೊಟ್ಟೆ, ಮೂತಿ ಮತ್ತು ಗಲ್ಲದ ಭಾಗ ಬಿಳಿ ತುಪ್ಪಳದಿಂದ ಮುಚ್ಚಲಾಗಿದೆ. ಕಣ್ಣುಗಳು ಬಿಳಿ ಉಂಗುರಗಳಿಂದ ಮುಚ್ಚಲ್ಪಟ್ಟಿವೆ. ಗಂಡು ಕೃಷ್ಣಮೃಗಗಳಿಗೆ ಮಾತ್ರ ಉಂಗುರದ ಕೊಂಬುಗಳಿವೆ. ಇವು ಸುಮಾರು 71 ಸೆಂ.ಮೀ ಉದ್ದದವರೆಗೆ ಬೆಳೆಯುತ್ತವೆ. ಗಂಡುಗಳು ಸುಮಾರು 20 ರಿಂದ 57 ಕೆ.ಜಿ. ಇರುತ್ತವೆ. ಸುಮಾರು 81 ಸೆಂ.ಮೀ ಎತ್ತರಕ್ಕೆ ಬೆಳೆಯುತ್ತವೆ. ಹೆಣ್ಣುಗಳು ಗಂಡುಗಳಿಗಿಂತ ಚಿಕ್ಕದಾಗಿದ್ದು 20 ರಿಂದ 33 ಕೆ.ಜಿ ತೂಗುತ್ತವೆ. ಇವು ಹಳದಿ ಮಿಶ್ರಿತ ಕಂದು ಬಣ್ಣದ ತುಪ್ಪಳವನ್ನು ಹೊಂದಿರುತ್ತವೆ. ಹೆಣ್ಣುಗಳಿಗೆ ಕೊಂಬುಗಳಿವೆ ಆದರೆ ಅವು ಉಂಗುರ ಅಥವಾ ಸುರುಳಿಯಾಗಿರುವುದಿಲ್ಲ. ಇವು ಕೊಂಬುಗಳನ್ನು ತಮ್ಮ ರಕ್ಷಣೆಗಾಗಿ ಮತ್ತು ಸಂಗಾತಿಗಳನ್ನು ಆಕರ್ಷಿಸಲು ಬಳಸುತ್ತವೆ.



ಚಿತ್ರ ಕೃಪೆ: ಗುರು ಪ್ರಸಾದ್

ಭಂಗಿ ಮತ್ತು ಚಲನೆಗಳು ಕೃಷ್ಣಮೃಗಗಳ ಮನಸ್ಥಿತಿಯ ಉತ್ತಮ ಸೂಚಕಗಳಾಗಿವೆ. ಉದಾಹರಣೆಗೆ, ಇವು ಗಾಬರಿಯಾದಾಗ ಅಥವಾ ಉತ್ಸುಕವಾದಾಗ ಚಾಚಿಕೊಂಡಿರುವ ಬೆನ್ನಿನಿಂದ ಮತ್ತು ಗಟ್ಟಿಯಾದ ಕಾಲುಗಳೊಂದಿಗೆ ಗಾಳಿಯಲ್ಲಿ ನೆಗೆಯುತ್ತವೆ.

ಈ ಚಿಗರಿಗಳು ಅತ್ಯಂತ ಜಾಗರೂಕವಾಗಿರುತ್ತವೆ. ಇವು ಗಾಳಿಯಲ್ಲಿ ನೆಗೆಯುವುದರಿಂದ ಪರಭಕ್ಷಕವನ್ನು ಗಮನಿಸಲು ಮತ್ತು ದಾಳಿಯ ಮೊದಲು ಓಡಿಹೋಗಲು ಅನುವು ಮಾಡಿಕೊಡುತ್ತದೆ. ಇವು ವಿಭಿನ್ನ ಪರಭಕ್ಷಕಗಳಿಗೆ ವಿಭಿನ್ನ ಹಾರಾಟದ ಅಂತರವನ್ನು ಹೊಂದಿವೆ ಚಿರತೆಗೆ ಹೆಚ್ಚು ದೂರವಿದ್ದರೆ ಕಡಿಮೆ - ಸಿಂಹಕ್ಕೆ ಅದು ನಿಧಾನವಾಗಿರುತ್ತದೆ.

ಇವು ಉತ್ತಮ ದೃಷ್ಟಿಯನ್ನು ಹೊಂದಿರುತ್ತವೆ ಮತ್ತು ಪರಭಕ್ಷಕಗಳಿಂದ ತಪ್ಪಿಸಿಕೊಳ್ಳಲು ಇವು 1 ಗಂಟೆಗೆ 80 ಕಿಲೋ ಮೀಟರ್ ಓಡಬಲ್ಲವು. ಕೃಷ್ಣಮೃಗಗಳು ಹೆಚ್ಚಾಗಿ ತೆರೆದ ಹುಲ್ಲುಗಾವಲುಗಳು, ಒಣ ಕುರುಚಲು ಪ್ರದೇಶಗಳು, ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತವೆ. ಇವು ಸಾಮಾನ್ಯವಾಗಿ ವರ್ಷವಿಡೀ ನೀರಿನ ಉತ್ತಮ ಮೂಲಗಳಿರುವ ಪ್ರದೇಶದಲ್ಲಿ ಕಂಡುಬರುತ್ತವೆ. ಬ್ಲ್ಯಾಕ್ ಬಕ್ಸ್ ತಂಪು ವಾತಾವರಣವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ, ಇವು ಹೆಚ್ಚಾಗಿ ರಾಜಸ್ಥಾನದ ಮರುಭೂಮಿ ಪ್ರದೇಶಗಳಲ್ಲಿ ಮತ್ತು ಕರಾವಳಿ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವು ಹಿಮಾಲಯದ ತಪ್ಪಲಿನಲ್ಲಿಯೂ ಕಂಡುಬರುತ್ತವೆ, ಅಲ್ಲಿ ಹವಾಮಾನವು ಮಧ್ಯಮವಾಗಿರುತ್ತದೆ ಮತ್ತು ಕಾಡುಗಳು ಹೆಚ್ಚು ದಟ್ಟವಾಗಿರುವುದಿಲ್ಲ. ಭಾರತದಲ್ಲಿ ಪ್ರಧಾನವಾಗಿ ಕರ್ನಾಟಕ, ಗುಜರಾತ್, ಪಂಜಾಬ್, ರಾಜಸ್ಥಾನ ಮತ್ತು ಹರಿಯಾಣ ರಾಜ್ಯಗಳಲ್ಲಿ ಕಂಡುಬರುತ್ತವೆ. ಇವುಗಳನ್ನು ಭೂಮಿಯ ಮೇಲೆ ವೇಗವಾಗಿ ಓಡುವ ಪ್ರಾಣಿಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.

ಕೃಷ್ಣಮೃಗಗಳು ಸಸ್ಯಾಹಾರಿ ಪ್ರಾಣಿಗಳಾಗಿವೆ. ಇವು ಹೆಚ್ಚಾಗಿ ಹುಲ್ಲನ್ನು ಮೇಯುತ್ತವೆ. ಹಣ್ಣಿನ ಬೀಜಗಳನ್ನು ಮತ್ತು ಅಕೇಶಿಯ ಮರದ ಎಲೆಗಳನ್ನು ಸಹ ತಿನ್ನುತ್ತವೆ. ಬೇಸಿಗೆಯಲ್ಲಿ ಇವುಗಳ ಆಹಾರ ಸೇವನೆಯು ಕಡಿಮೆ ಇರುತ್ತದೆ. ನೀರು ಇವುಗಳ ಜೀವನದ ಅವಿಭಾಜ್ಯ ಅಂಗವಾಗಿದೆ ಇವುಗಳು ಸಹಿತ ನೀರಿಲ್ಲದೆ ಬದುಕಲು ಸಾಧ್ಯವಿಲ್ಲ.

ಇವುಗಳ ಪರಭಕ್ಷಕಗಳು ತೋಳ, ಕತ್ತೆಕಿರುಬ, ಕಾಡು ಬೆಕ್ಕು, ನರಿ, ಹೆಬ್ಬಾವುಗಳು, ಕಾಡು ಹಂದಿಗಳು ಮತ್ತು ಕಾಡು ನಾಯಿಗಳು.

ಕೃಷ್ಣಮೃಗಗಳು ಹಗಲಿನಲ್ಲಿ ಸಕ್ರಿಯವಾಗಿರುತ್ತವೆ ಮತ್ತು ಇವುಗಳ ಚಟುವಟಿಕೆಗಳು ಸಾಮಾನ್ಯವಾಗಿ ಮಧ್ಯಾಹ್ನದಲ್ಲಿ ನಿಧಾನಗೊಳ್ಳುತ್ತವೆ. ಇವು ಸಾಮಾನ್ಯವಾಗಿ ಗುಂಪುಗಳಲ್ಲಿ ಚಲಿಸುತ್ತವೆ. ಗುಂಪಿನ ಗಾತ್ರವು ಮೇವು ಮತ್ತು ನೈಸರ್ಗಿಕ ಆವಾಸಸ್ಥಾನದ ಲಭ್ಯತೆಯ ಮೇಲೆ ಅವಲಂಬಿತವಾಗಿರುತ್ತದೆ. ಗುಂಪುಗಳಲ್ಲಿ 10 ರಿಂದ 23 ಕೃಷ್ಣಮೃಗಗಳು ಇರುತ್ತವೆ. ಗುಂಪುಗಳಲ್ಲಿ ವಾಸಿಸುವ ಚಿಗರಿಗಳು, ತಮ್ಮ ಗೊರಸು (ಕಾಲಿನ ಪಾದದ ಭಾಗ) ಗಳಲ್ಲಿ ಗ್ರಂಥಿಗಳನ್ನು ಹೊಂದಿದ್ದು, ಇವು ಚಲಿಸುವಾಗ ಪರಿಮಳವನ್ನು ಬಿಡುತ್ತವೆ. ನಂತರ ಬೇರ್ಪಟ್ಟ ಚಿಗರಿಗಳು ಪರಿಮಳದ ವಾಸನೆಯನ್ನು ಅನುಸರಿಸಿ ತಮ್ಮ ಗುಂಪುಗಳನ್ನು ಸೇರುತ್ತವೆ.

ಗಂಡುಗಳು 3 ನೇ ವಯಸ್ಸಿನಲ್ಲಿ ಪ್ರಬುದ್ಧತೆಯನ್ನು ಪಡೆಯುತ್ತವೆ ಮತ್ತು ಹೆಣ್ಣು ಎರಡು ವರ್ಷ ವಯಸ್ಸಿನಲ್ಲಿ ಪ್ರಬುದ್ಧತೆಯನ್ನು ಪಡೆಯುತ್ತವೆ. ಬ್ಲ್ಯಾಕ್ ಬಕ್ ಗಳು ವಿಶಿಷ್ಟವಾದ ಸಂತಾನೋತ್ಪತ್ತಿ ವ್ಯವಸ್ಥೆಯನ್ನು ಹೊಂದಿವೆ.



ಚಿತ್ರ ಕೃಪೆ: ಗುರು ಪ್ರಸಾದ್

ಗಂಡು ಹುಲ್ಲುಗಾವಲಿನಲ್ಲಿ ಪ್ರಾಂತ್ಯಗಳನ್ನು ಸ್ಥಾಪಿಸುತ್ತದೆ ಮತ್ತು ಅವುಗಳನ್ನು ಇತರ ಗಂಡುಗಳಿಂದ ರಕ್ಷಿಸುತ್ತದೆ. ಹೆಣ್ಣು ಚಿಗರಿಗಳಿಗೆ ಈ ಪ್ರದೇಶದ ಮೂಲಕ ಬರಲು ಅನುಮತಿಸಲಾಗುತ್ತದೆ. ಹೆಣ್ಣುಗಳು ನಂತರ ಗಂಡು ಸ್ಥಾಪಿಸಿದ ಪ್ರದೇಶ ಮತ್ತು ಪ್ರದರ್ಶನಗಳ ಗುಣಮಟ್ಟವನ್ನು ಆಧರಿಸಿ ಸಂಗಾತಿಯನ್ನು ಆಯ್ಕೆ ಮಾಡುತ್ತವೆ. ಇವು ಬಹುಪತ್ನಿತ್ವದ ಸಂಯೋಗ ವ್ಯವಸ್ಥೆಯನ್ನು ಹೊಂದಿವೆ, ಅಂದರೆ ಒಂದು ಗಂಡು ಬ್ಲ್ಯಾಕ್ ಬಕ್ ಚಿಗರಿಯು ಒಂದಕ್ಕಿಂತ ಹೆಚ್ಚು ಹೆಣ್ಣುಗಳೊಂದಿಗೆ ಸಂಗಾತಿಯಾಗುತ್ತದೆ. ಬ್ಲ್ಯಾಕ್ ಬಕ್ ಸಂವಹನದ ಸಾಧನವಾಗಿ ವಿವಿಧ ರೀತಿಯ ಶಬ್ದಗಳನ್ನು ಬಳಸುತ್ತದೆ. ಉದಾಹರಣೆಗೆ, ಇವು ಡಿಕ್-ಡಿಕ್ಸ್ ಸೀಟಿಯ ಶಬ್ದವನ್ನು ಬಳಸುತ್ತವೆ, ಇದು ಎಚ್ಚರಿಕೆ ಅಥವಾ ಆತಂಕವನ್ನು ಪ್ರತಿನಿಧಿಸುತ್ತದೆ.

ಸಂಯೋಗದ ಅವಧಿಯು ಆಗಸ್ಟ್ ನಿಂದ ಅಕ್ಟೋಬರ್ ವರೆಗೆ ಮತ್ತು ಮಾರ್ಚ್ ನಿಂದ ಏಪ್ರಿಲ್ ವರೆಗೆ ಇರುತ್ತದೆ. ಹೆಣ್ಣು ವರ್ಷಕ್ಕೆ ಎರಡು ಬಾರಿ ಜನ್ಮ ನೀಡಬಹುದು. ಗಂಡುಗಳನ್ನು ಬಕ್ಸ್ ಎಂದು ಕರೆಯಲಾಗುತ್ತದೆ, ಹೆಣ್ಣುಗಳನ್ನು ಡಸ್ ಎಂದು ಕರೆಯಲಾಗುತ್ತದೆ ಮತ್ತು ಶಿಶುಗಳನ್ನು ಜಿಂಕೆಗಳು ಎಂದು ಕರೆಯಲಾಗುತ್ತದೆ.



ಚಿತ್ರ ಕೃಪೆ: ಗುರು ಪ್ರಸಾದ್

ಭಾರತದ ಸ್ವಾತಂತ್ರ್ಯದ ಮೊದಲು ಕೃಷ್ಣಮೃಗಗಳನ್ನು ಭಾರತದ ರಾಜಪ್ರಭುತ್ವದ ರಾಜ್ಯಗಳಲ್ಲಿ ವ್ಯಾಪಕವಾಗಿ ಬೇಟೆಯಾಡಲಾಗುತ್ತಿತ್ತು. ಇದರಿಂದಾಗಿ ಇವುಗಳ ಜನಸಂಖ್ಯೆಯು ನಿರಂತರವಾಗಿ ಕ್ಷೀಣಿಸುತ್ತಿದೆ. ಇದು ಭಾರತದ ಹಲವು ಭಾಗಗಳಲ್ಲಿ ಕೃಷ್ಣ ಮೃಗಗಳ ಜಾತಿಯ ಅಳಿವಿಗೆ ಕಾರಣವಾಯಿತು. ಈ ಪ್ರಾಣಿಗಳನ್ನು ಅವುಗಳ ಚರ್ಮಕ್ಕಾಗಿ ಬೇಟೆಯಾಡಲಾಗುತ್ತದೆ. ಕಳ್ಳ ಬೇಟೆಗಾರರು ಈ ಜಾತಿಯ ಪ್ರಾಣಿಗಳನ್ನು 20ನೇ ಶತಮಾನದಿಂದ ಮುಖ್ಯ ಗುರಿಯನ್ನಾಗಿ ಮಾಡಿಕೊಂಡು ಬೇಟೆಯಾಡುತ್ತಿದ್ದಾರೆ.

ಇವುಗಳ ಸರಾಸರಿ ಜೀವಿತಾವಧಿಯು 10 ರಿಂದ 15 ವರ್ಷಗಳು. 1972 ರ ವನ್ಯಜೀವಿ ಸಂರಕ್ಷಣಾ ಶೆಡ್ಯೂಲ್ 1 ಕಾಯ್ದೆಯ ಪ್ರಕಾರ ಭಾರತದಲ್ಲಿ ಕೃಷ್ಣಮೃಗ ಬೇಟೆಯಾಡುವುದನ್ನು ನಿಷೇಧಿಸಲಾಗಿದೆ. ಇದು ವೆಲವಾದರ್ ವನ್ಯಜೀವಿ ಅಭಯಾರಣ್ಯ ಮತ್ತು ಗಿರ್ ಅರಣ್ಯ ರಾಷ್ಟ್ರೀಯ ಉದ್ಯಾನವನ (ಗುಜರಾತ್) ಕೈಮೂರ್ ವನ್ಯಜೀವಿ ಅಭಯಾರಣ್ಯ (ಬಿಹಾರ) ಗ್ರೇಟ್ ಇಂಡಿಯನ್ ಬಸ್ಟರ್ಡ್ ಅಭಯಾರಣ್ಯ (ಮಹಾರಾಷ್ಟ್ರ) ಕುನೋ ರಾಷ್ಟ್ರೀಯ ಉದ್ಯಾನವನ (ಮಧ್ಯಪ್ರದೇಶ) ತಾಲ್ ಛಾಪರ್ ಅಭಯಾರಣ್ಯ, ರಾಷ್ಟ್ರೀಯ ಚಂಬಲ್ ಅಭಯಾರಣ್ಯ ಮತ್ತು ರಣಥಂಬೋರ್ ರಾಷ್ಟ್ರೀಯ ಉದ್ಯಾನವನ (ರಾಜಸ್ಥಾನ) ರಾಣಿಬೆನ್ನೂರು ಕೃಷ್ಣಮೃಗ ಅಭಯಾರಣ್ಯ (ಕರ್ನಾಟಕ) ಪಾಯಿಂಟ್ ಕ್ಯಾಲಿಮೆರ್ ವನ್ಯಜೀವಿ ಮತ್ತು ಪಕ್ಷಿಧಾಮ, ವಲ್ಲನಾಡು ವನ್ಯಜೀವಿ ಅಭಯಾರಣ್ಯ ಮತ್ತು ಗಿಂಡಿ ರಾಷ್ಟ್ರೀಯ ಉದ್ಯಾನವನ. (ತಮಿಳುನಾಡು) ಸೇರಿದಂತೆ ಭಾರತದ ಹಲವಾರು ಸಂರಕ್ಷಿತ ಪ್ರದೇಶಗಳಲ್ಲಿ ಕಂಡುಬರುತ್ತದೆ.

::::::::::::::::::::::::::::::::::::::::::::::::

**ಶ್ರೀ ನವೀನ ಪ್ಯಾಟಿಮನಿ**
**ಟ್ಯಾಕ್ಸಿಡರ್ಮಿಸ್ಟ**
**ಪ್ರಾದೇಶಿಕ ಪ್ರಾಕೃತಿಕ ನೈಸರ್ಗಿಕ ಇತಿಹಾಸ ವಸ್ತುಸಂಗ್ರಹಾಲಯ, ಮೈಸೂರು.**
**ಇಮೇಲ್:-naveenpyatimani9901@gmail.com**